02

# ಕನ್ನಡ ನೋಟ
# ಶಾಂತಿಯ ತೋಟ




ಸಂಪಾದಕರು

ಡಾ. ಸರ್ವೇಶ್ ಬಿ.ಎಸ್

ಪ್ರೊ ಚಂದ್ರಶೇಖರ್ ಎನ್.

ಡಾ. ಸೈಯದ್ ಮುಯಿನ್

ಡಾ. ರವಿಶಂಕರ್ ಎ.ಕೆ

ಡಾ. ಬೈರಪ್ಪ ಎಂ.



Kristu Jayanti College

AUTONOMOUS Bengaluru

# Kannada Nota Shanthiya Thota

**(Collection of Research Articles)**


Edited by

**Dr. Sarvesh B.S**

Head, Department of Kannada

Mob. No: 9738482935

**Prof. Chandrashekar N.**

Assistant Professor, Department of Kannada

Mob. No: 9916465100

**Dr. Syed Muen**

Assistant Professor, Department of Kannada

Mob. No: 9972925077

**Dr. Ravishankar A.K.**

Assistant Professor, Department of Kannada

Mob. No: 9663433403

**Dr. Byrappa M.**

Assistant Professor, Department of Kannada

Mob. No: 9741436723

**Kristu Jayanti College Autonomous**

**K.Narayanapura, Banagalore-77**



**Usha Prakashana**

# 2542, Hebbal 2nd Stage,

Near Renuka Yellamma Temple,

Mysuru-570017

**ISBN : 978-93-92051-19-7**

First Impression : 2023

Page : xiv+294+4= 312



© : Author



Copies : 600

Price : Rs. 400/-

Size of the Book : 1/8 Demy

Paper Used : Maplitho

D.T.P. : Anukshana Creations, Mob: 8660867073

Cover Page Design : Kiran

Printed at : Print Culture, Mysuru

# 'ಸ್ಮಶಾನ ಕುರುಕ್ಷೇತ್ರಂ' ನಾಟಕದ ಯುದ್ಧ ವಿರೋಧಿ ನೆಲೆ

❖

ಡಾ. ಬಿ.ಕೆ. ಮಂಜುಳ

ಮನುಕುಲದ ಇತಿಹಾಸವನ್ನು ಅವಲೋಕಿಸಿದಾಗ ನಡೆದಿರುವ ಯುದ್ಧಗಳನ್ನು ಪರಿಶೀಲಿಸಿದರೆ ಅಚ್ಚರಿಯಾಗುತ್ತದೆ. ಧರ್ಮದ ಹೆಸರಿನಲ್ಲಿ, ದೇಶದ ಹೆಸರಿನಲ್ಲಿ, ಭಾಷೆ-ಬಣ್ಣಗಳ ಹೆಸರಿನಲ್ಲಿ, ಗಡಿಗಳ ಹೆಸರಿನಲ್ಲಿ, ಸ್ವಾತಂತ್ರ್ಯದ ಹೆಸರಿನಲ್ಲಿ ನಡೆದ ಮತ್ತು ನಡೆಯುತ್ತಿರುವ ಯುದ್ಧಗಳು ಉಂಟು ಮಾಡಿರುವ, ಮಾಡುತ್ತಿರುವ ಹಾನಿ ಲೆಕ್ಕಕ್ಕೆ ಸಿಗದಷ್ಟು ದೊಡ್ಡದು. ಇದರಿಂದ ಅಪಾರವಾದ ಜೀವನಾಶ, ಸಂಪತ್ತಿನನಾಶ, ಅಭಿವೃದ್ಧಿನಾಶ, ಶಾಂತಿನಾಶಗಳು ಆಗುತ್ತವೆ. ಇವುಗಳ ನೇರ ಪರಿಣಾಮಗಳು ಯುದ್ಧದಲ್ಲಿ ಮಡಿದವರ ಕುಟುಂಬದವರ ಗೋಳು, ಅನಾಥತನ, ಅತ್ಯಾಚಾರಕ್ಕೆ ಒಳಗಾಗುವ ಹೆಂಗಸರ ಪಾಡು ಅತ್ಯಂತ ಶೋಚನಿಯವಾದುದು. ಯುದ್ಧ ಖೈದಿಗಳ ಸಮಸ್ಯೆ, ಅಂಗವಿಕಲರಾಗುವ ಸೈನಿಕರ ಪಾಡು, ಸಾಮಾನ್ಯನ ಮೇಲೆ ಬೀಳುವ ಹೆಚ್ಚಿನ ತೆರಿಗೆಯ ಹೊರೆ ಇಂಥ ಅನೇಕ ದುಷ್ಪರಿಣಾಮಗಳಿಗೆ ಯುದ್ಧಗಳು ಸಾಕ್ಷಿಗಳಾಗಿವೆ. ಯುದ್ಧದಲ್ಲಿ 'ಗೆದ್ದವನು ಸೋತಂತೆ, ಸೋತವನು ಸತ್ತಂತೆ'. ಇಷ್ಟಾದರೂ ಸಹ ಮುನುಷ್ಯ ಯುದ್ಧಗಳನ್ನು ಮಾಡುವುದನ್ನು ಬಿಟ್ಟಿಲ್ಲ. ಮನುಷ್ಯನ ಅಹಂಕಾರ, ಹುಂಬುತನ, ಪ್ರತಿಷ್ಠೆ, ಸ್ವಾರ್ಥ, ಅಧಿಕಾರದಾಹ, ಜೀವ ವಿರೋಧಿ ನಿಲುವುಗಳು ಬದಲಾಗಿಲ್ಲವೆಂಬುದೇ ಇದರ ಅರ್ಥ.

ರಾಜರ, ರಾಜಕಾರಣಿಗಳ ಅಧಿಕಾರ ದಾಹ, ಅಹಂಕಾರಗಳು ಸಮಾಜವನ್ನು, ದೇಶಗಳನ್ನು ಒಟ್ಟಾರೆ ಜೀವಸಂಕುಲವನ್ನು ಸುಟ್ಟು ಬೂದಿ ಮಾಡುತ್ತದೆ. ವ್ಯಕ್ತಿಯೊಬ್ಬನ ಮನಸ್ಸಿನಲ್ಲಿ ಯುದ್ಧ ನಡೆಯಬಹುದು. ಇಬ್ಬರು ವ್ಯಕ್ತಿಗಳ ನಡುವೆ ಯುದ್ಧ ನಡೆಯಬಹುದು, ಗುಂಪುಗಳ ಮಧ್ಯೆ, ದೇಶಗಳ ಮಧ್ಯೆ ಅಥವಾ ಮಹಾಯುದ್ಧಗಳೇ ನಡೆಯಬಹುದು. ಯುದ್ಧ ಯಾವುದೇ ಸ್ವರೂಪದಲ್ಲಿರಲಿ, ಯುದ್ಧದಿಂದ ಶಾಂತಿಯನ್ನು ಮಾತ್ರ ಪಡೆಯಲು ಸಾಧ್ಯವಿಲ್ಲ. ಮೊದಲ ಪೌರಾಣಿಕ, ಚಾರಿತ್ರಿಕ ಯುದ್ಧಗಳಾದಿಯಾಗಿ ಪ್ರಪಂಚದ ಮೊದಲ ಮತ್ತು ಎರಡನೆ ಮಹಾಯುದ್ಧಗಳಿಂದ

ಇಂದಿನ ರಷ್ಯಾ-ಉಕ್ರೇನ್ ಯುದ್ಧಗಳಲ್ಲಿ ತೊಡಗಿದವರಿಗೆ ಇದ್ದ ಮತ್ತು ಇರುವ ಹಸಿವು-ದಾಹಗಳು ಎಂತಹವು. ಯುದ್ಧಗಳನ್ನು ಕೊನೆಗಾಣಿಸಿ ಶಾಂತಿಯಿಂದ ಮಾನವ ಸಮಾಜ ಬದುಕಲು ಸಾವಿರಾರು ಜನ ಸಂತರು, ದಾರ್ಶನಿಕರು, ಜ್ಞಾನಿಗಳು ಪ್ರಪಂಚದಲ್ಲಿ ಯುದ್ಧಗಳನ್ನು ಕೊನೆಗಾಣಿಸಿ ಶಾಂತಿ ನೆಲೆಸುವಂತೆ ಮಾಡಲು ಪ್ರಯತ್ನಿಸಿದ್ದಾರೆ. ಶಾಂತಿಯ ಮಹತ್ವವನ್ನು ಸಾರಿದ್ದಾರೆ. ಆದರೂ ಸಹ ಯುದ್ಧದ ಉನ್ಮತ್ತರ ಕಿವಿಗೆ ಶಾಂತಿಯ ಸಂದೇಶಗಳು ತಲುಪಲೇ ಇಲ್ಲ.

ಪುರಾಣ ಕತೆಗಳು ಜನಪದರ ಮನಸುಗಳಲ್ಲಿ ಆಳವಾಗಿ ಬೇರೂರಿರುತ್ತವೆ. ಅವು ಬದುಕಿನ ಭಾಗವಾಗಿ ತಲೆಮಾರುಗಳಿಂದ ತಲೆಮಾರುಗಳಿಗೆ ರವಾನೆ ಆಗುತ್ತ ಸಾಗಿ ಬಂದಿರುತ್ತವೆ. ಇಂತಹ ಪುರಾಣ ಕತೆಗಳನ್ನು ಆಯ್ಕೆ ಮಾಡಿಕೊಂಡು ಕಥೆ, ಕಾದಂಬರಿ, ನಾಟಕ, ಕಾವ್ಯಗಳು ರಚನೆಗೊಂಡಿವೆ. ಪುರಾಣ ಕತೆ, ಪಾತ್ರ, ವಸ್ತು, ನಿರ್ವಹಣೆ, ಸಂವಿಧಾನ, ತಂತ್ರಗಳ ಚೌಕಟ್ಟಿನಲ್ಲಿ ಸಾಹಿತಿ ತನ್ನ ಕಾಲದ ಗುಣಗಳು, ಮೌಲ್ಯಗಳು, ಆದರ್ಶಗಳನ್ನು ತುಂಬುತ್ತಾನೆ. ಹಳೆಯದನ್ನು ವಿಮರ್ಶಿಸುತ್ತ, ಚಿಂತನೆಗೆ ಒಳಪಡಿಸುತ್ತ ಪುರಾಣ ಕತೆಗಳನ್ನು ಆಶ್ರಯಿಸುತ್ತಲೇ ಹೊಸ ವಿಚಾರಗಳನ್ನು ಸಾಹಿತಿ ಪ್ರತಿಪಾದಿಸುತ್ತಾನೆ. ಹಾಗೆಯೇ ಪ್ರಸ್ತುತ 'ಸ್ಮಶಾನ ಕುರುಕ್ಷೇತ್ರಂ' ನಾಟಕವು ಸಹ. ಹಿಂದಿನ ಕಾಲದ ನಂಬಿಕೆಗಳನ್ನು ವಿಮರ್ಶಿಸುವುದು ಮತ್ತು ಹೊಸ ವಿಚಾರಗಳನ್ನು ಮಂಡಿಸುವುದು ಸಹ ಇಲ್ಲಿ ಏಕಕಾಲಕ್ಕೆ ನಡೆಯುತ್ತದೆ.

1931ರಲ್ಲಿ ಕುವೆಂಪು ಸ್ಮಶಾನ ಕುರುಕ್ಷೇತ್ರಂ ನಾಟಕವನ್ನು ರಚಿಸಿದರು. ಮೊದಲ ಪ್ರಪಂಚದ ಮಹಾಯುದ್ಧದ ಪರಿಣಾಮಗಳು ಶ್ಮಶಾನ ಕುರುಕ್ಷೇತ್ರಂ ನಾಟಕ ಬರೆಯಲು ಪ್ರೇರಕವೆನ್ನಬಹುದು. ಯುದ್ಧಗಳ ಭೀಕರತೆಯನ್ನು, ಯುದ್ಧಭೂಮಿಗಳು ಶ್ಮಶಾನಗಳಾಗುವಿಕೆಯನ್ನು ಹಾಗೂ ಅತಿಯಾದ ವಿನಾಶ ಅದರ ಪರಿಣಾಮಗಳನ್ನು ಕುವೆಂಪು ನಾಟಕದಲ್ಲಿ ಅಭಿವ್ಯಕ್ತಿಸಿದ್ದಾರೆ. ನಾಟಕದ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ. "ಇದೊಂದು ಪ್ರತಿಮಾಸೃಷ್ಟಿ. ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶನ, ಅವಿವೇಕ, ದುರ್ಲಂಘ್ಯ ವಿಧಿ, ಸರ್ವ ವಿಫಲತೆ, ಸಂಸ್ಕೃತಿಯ ಸಾವು – ಇದಕ್ಕೆ ಪ್ರತಿಮೆ. ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಉದ್ಧವನ್ನೆ ಕೊನೆಗಾಣಿಸುವ ಜಗತ್ತಿನ ಕೊನೆಯ ಅನಿವಾರ್ಯ ಸಂಕಟವೆಂದು ಸಾರುತ್ತೇವೆ. ಅನ್ಯಾಯುವೆಲ್ಲ ತೊಲಗಿ ನ್ಯಾಯಸ್ಥಾಪನೆಯಾಗುವುದೆಂದು ಭಾವಿಸುತ್ತೇವೆ. ಕಲಿ ಹೋಗಿ ಕೃತಯುಗ ಪ್ರಾರಂಭವಾಗುತ್ತದೆಂದು. ಆದರೆ? ಮತ್ತೆ! ವಿಶೇಷತೆಗಾಗಿ ಸಾಮಾನ್ಯರ ಆಹುತಿ. ಸಂಸ್ಕೃತಿ ನಾಗರಿಕತೆ ಪ್ರಗತಿ ಎಲ್ಲ ಶ್ಮಶಾನರುದ್ರನ ಮೆಯ್ಗೆ ಭಸ್ಮಲೇಪನವಾಗುತ್ತದೆ. ಸರಿ, ಪುನರ್ ಸೃಷ್ಟಿಯ ಪ್ರಾರಂಭ, ನಾಟಕಾರಂಭ: ವಿಶ್ವಲೀಲೆ ಸಾಗುತ್ತದೆ"[1]

ಎಂಬ ಅಭಿಪ್ರಾಯದಲ್ಲಿ ಯುದ್ಧ ನಿರಂತರ ಪ್ರಕ್ರಿಯೆಯಂತೆ ಮುಂದುವರೆಯುವಿಕೆಯ ಸೂಚನೆಯನ್ನು ಗಮನಿಸಬಹುದು. ವಿನಾಶದ ಗರ್ಭದಲ್ಲಿ ಸೃಷ್ಟಿಯ ಬೀಜ ಅಡಗಿರುವಂತೆ ವಿನಾಶದ ಸ್ಥಿತಿಯಲ್ಲೂ ನವಸೃಷ್ಟಿಯನ್ನು ಕಾಣುವ ಕವಿಯ ದರ್ಶನ ಕ್ರಿಯೆಯಲ್ಲಿ ಜೀವನ ಕ್ರಮದ ಆಶಾಮನೋಭಾವವನ್ನು ಗುರುತಿಸಬಹುದು. ಜೊತೆಗೆ "ಬದಲಾಗುತ್ತಿರುವ ಭಾರತದಲ್ಲಿ ನಾವು ಇವತ್ತು ಎದುರಿಸುತ್ತಿರುವ ಎಲ್ಲ ಬಿಕ್ಕಟ್ಟುಗಳನ್ನು, ಎಲ್ಲ ದಿಗ್ಭ್ರಮೆಗಳನ್ನು, ಕುವೆಂಪು ತಮ್ಮ ಕೃತಿಗಳಲ್ಲಿ ಕಾಣಿಸಿದ್ದಾರೆ"ಎಂಬ ನಿಲುವು ಸಮಂಜಸವಾಗಿದೆ.

ಸ್ಮಶಾನ ಕುರುಕ್ಷೇತ್ರಂ ನಾಟಕವು ಹದಿನೆಂಟು ದಿನಗಳು ರಣಕೋಲಾಹಲದಿಂದ ತುಂಬಿ ತುಳುಕಿದ ಮಹಾಭಾರತದ ಸಂಗ್ರಾಮವು ಸಂಪೂರ್ಣವಾಗಿ ಕೊನೆಗೊಂಡ ದಿನದ ಘೋರ ವಿಷಣ್ಣ ರಾತ್ರಿ. ಅಲ್ಲಿಯವರೆಗೂ ಯುದ್ಧಭೂಮಿಯಾಗಿದ್ದ ಕುರುಕ್ಷೇತ್ರವು ಅಂದು ಭಯಂಕರವಾದ ಶ್ಮಶಾನವಾಗಿದೆ. ವಿಸ್ತಾರವಾದ ಯುದ್ಧಭೂಮಿಯ ಬಯಲಿನ ಕಗ್ಗತ್ತಲಿನಲ್ಲಿ ಅಪಾರವಾದ ಸೈನಿಕರ ಶವಗಳಿವೆ. ಲೆಕ್ಕವಿಲ್ಲದಷ್ಟು ಆನೆ, ಕುದುರೆಗಳ ಕಳೇಬರಗಳು, ಮುರಿದ ತೇರುಗಳು ರಾಶಿ ರಾಶಿಯಾಗಿ ಅಸ್ತವ್ಯಸ್ತವಾಗಿ ಬಿದ್ದಿವೆ. ಸಾಯುವವರು, ಗಾಯಗೊಂಡವರ ನರಳಾಟ, ಗೋಳಾಟ ಹೃದಯವನ್ನು ಹಿಂಡುವಂತೆ ಭಾಸವಾಗುತ್ತದೆ. ಮತ್ತೊಂದೆಡೆ ಕತ್ತಲೆಯ ರಾತ್ರಿಯಲ್ಲಿ ಕೈಯಲ್ಲಿ ಸೊಡರು ಹಿಡಿದು ಕುರುಕ್ಷೇತ್ರ ಯುದ್ಧದಲ್ಲಿ ಮಡಿದ ತಮ್ಮ ಬಂಧು-ಬಾಂಧವರನ್ನು ಅವರ ಸಂಬಂಧಿಕರು ಹುಡುಕುತ್ತಿದ್ದಾರೆ. ಕೌರವ, ಪಾಂಡವ ಕಡೆಯವರೆಂಬ ಭೇದವಿಲ್ಲದೆ ತಮ್ಮ ತಮ್ಮ ನೆಂಟರಿಷ್ಟರ ದೇಹಗಳನ್ನು ಅರಸುತ್ತಿದ್ದಾರೆ. ದುಃಖಮಯವಾದ, ಭಯಂಕರವಾದ ರಾತ್ರಿ ಅದು. ಭೀಮನ ಗದೆಯಿಂದ ತೊಡೆ ಮುರಿದು ವೈಶಂಪಾಯನ ಸರೋವರದ ಬಳಿ ಬಿದ್ದು ನರಳಾಡುತ್ತಿರುವ ದುರ್ಯೋಧನ ಜೀವದಿಂದ ಇದ್ದಾನೆ. ಇಂತಹ ಸಂದರ್ಭದಲ್ಲಿ ದ್ವಾಪರಯುಗ ಮುಗಿದು ಕಲಿಯುಗ ಪ್ರಾರಂಭವಾಗುವುದು.

ಇಂತಹ ವಿನಾಶದ ಧಾರುಣ ಸ್ಥಿತಿಯ ಶ್ಮಶಾನದ ನಡುವೆ ತನ್ನ ಯುಗದ ಅವಧಿಯ ಅಧಿಕಾರವನ್ನು ದ್ವಾಪರ ಮುಂದಿನ ಯುಗಾಧಿಪತಿ ಕಲಿಗೆ ಅತ್ಯಂತ ಖಿನ್ನತೆ, ದುಗುಡದಿಂದ ಒಪ್ಪಿಸುತ್ತಾನೆ. ಯುದ್ಧದ ಬಗೆಗಿನ ಕುವೆಂಪು ನಿಲುವು ದ್ವಾಪರನ ಮಾತುಗಳಲ್ಲಿ ಹೀಗೆ ವ್ಯಕ್ತವಾಗಿದೆ.

"ಇಂದನ್ನೆವರೆಗಂ ಕುರುಕ್ಷೇತ್ರ
ಅರಸುಗಳ ರಣರಂಗಮಾಗಿತ್ತು; ಕೊಳೆಯಲಿಹ
ಪೆಣದ ಬಣಬೆಯ ಕಣವದಾಗಿರ್ಪುದೀ ಪೊಳ್ತು!
ನಿನ್ನೆಯಿದು ಮೆಯ್ಗಲಿಗಳಾಡುಂಬೊಲಾಗಿತ್ತು;

ಮರುಳ್ಗಾಡುತಿಹ ಮಸಣವಾಗಿಹುದಿಂದು!–
ಕಾಳೆಗದ ನೆಲಗಳೆನೆ ಬಿತ್ತರದ ಮಸಣಗಳ್!
ಕಾಳೆಗವೊ ಬಿತ್ತರದ ಕೊಲೆಗೆಯ್ಮೆ! ಗೆಲವೆಂದರೇನ್?–

ಸೋಲ್ವರ ಸಂತಾಪಂ; ವಿಜಯಿಗಳ ಪೆರ್ಮೆ!" ಹೀಗೆ ದ್ವಾಪರನ ಮಾತುಗಳಲ್ಲಿ ಯುದ್ಧಭೂಮಿಯ ಭೀಕರತೆ ಮತ್ತು ಸೋಲು ಗೆಲುವುಗಳ ಬಗ್ಗೆ ನಿರೂಪಿತವಾಗಿದೆ.

ಇಂದಿನ ತಲೆಮಾರು ಮುಂದಿನ ತಲೆಮಾರಿಗೆ ಬಿಟ್ಟುಕೊಡುವುದು ತನ್ನ ಕಾಲದಲ್ಲಿ ಸಂಪಾದಿಸಿದ ಭವ್ಯವಾದ ದಿವ್ಯ ಸೃಷ್ಟಿಗಳನ್ನು, ಆದರ್ಶಗಳನ್ನು ಹಾಗೂ ಸಾರ್ವಕಾಲಿಕವಾದ ಗುಣ, ಮೌಲ್ಯಗಳನ್ನು ನೀಡುತ್ತದೆ. ಅವುಗಳ ಆಧಾರದ ಮೇಲೆ ಅತಿ ಉನ್ನತ ಜೀವನವನ್ನು ರೂಪಿಸಿಕೊಳ್ಳಲೆಂಬ ಆಶಯವು ಸಹ ಇರುತ್ತದೆ. ದ್ವಾಪರಯುಗ ತನ್ನ ಅಧಿಕಾರವನ್ನು ಕಲಿಯುಗಕ್ಕೆ ನೀಡುವ ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ.

"ಬರಿಸಗಳ ಗೆಯ್ಮೆಯಿಂ ಗಳಿಸಿರ್ದ ಸಂಸ್ಕೃತಿಯ
ಚೆಲ್ವಿಕೆ ತುತ್ತತುದಿಯಲಿ ಪುಚ್ಚಳಿದು ಪೋಯ್ತೆ?
ನಿನಗೆನ್ನ ಕಾಲಸಾಮ್ರಾಜ್ಯಮಂ ಮರಳೀವ
ಸಮಯದಲಿ, ಆವ ಪೆರ್ಮೆಯೊಳಾವ ಮೆಚ್ಚುಗೆಯ
ವಸ್ತುವನ್ ಎನ್ನಕೃತಿ ಎಂದಾನು ತೋರಿಸಲಿ?
ಈ ಮಹಾಕುರುಕ್ಷೇತ್ರ ಶ್ಮಶಾನಮಂ ತೋರಲೇನ್?
ಅಳಿದ ತುಳಿಲಾಳ್ಗಳ ಶವಂಗಳಂ ನಿನಗಿತ್ತಪೆನೆ?
ಮುರಿದ ಹೊಂದೇರುಗಳ್ ಮಂದೆಯಂ ತೋರ್ದಪೆನೆ?

ನಿನಗಾವ ಮಂಗಳದ ಸಿರಿಯನೀಯಲಿ? ಹೇಳು"[4] ಹೀಗೆ ಹೇಳುವ ದ್ವಾಪರನ ಮಾತುಗಳಲ್ಲಿ ತನ್ನ ಯುಗದಲ್ಲಿ ಕಟ್ಟಿ ಬೆಳೆಸಿದ್ದ, ತನ್ನ ಯುಗಕ್ಕೆ ಹೆಮ್ಮೆಯ ಹೆಗ್ಗುರುತುಗಳಾಗಿದ್ದವೆಲ್ಲ ಸುಟ್ಟು ಬೂದಿಯಾಗಿವೆ. ಭೂತಕಾಲದ ಆಧಾರದ ಮೇಲೆ ಭವಿಷ್ಯತ್ತಿನ ಕಲ್ಪನೆಗಳೊಂದಿಗೆ ಬದುಕು ವರ್ತಮಾನದಲ್ಲಿ ಸಾಗುತ್ತಿರುತ್ತದೆ. ವರ್ತಮಾನದ ತಲೆಮಾರು ತನ್ನ ಮುಂದಿನ ತಲೆಮಾರಿಗೆ ಶ್ರೇಷ್ಠತಮವಾದ ಮತ್ತು ಉತ್ತಮವಾದುದನ್ನು ಬಿಟ್ಟುಹೋಗಲು ಹೆಮ್ಮೆ ಪಡುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಸರ್ವನಾಶವಾದುದನ್ನು ಶ್ಮಶಾನದಲ್ಲಿ ಬಿಟ್ಟು ಹೋಗುವ ದುರಂತವನ್ನು ನಾಟಕಕಾರರು ಚಿತ್ರಿಸಿದ್ದಾರೆ. ಹೀಗೆ ನಾಶವನ್ನು ತನ್ನ ಮುಂದಿನ ಪೀಳಿಗೆಗೆ ಕೊಡುವ ಪರಿಸ್ಥಿತಿ ಯಾರಿಗೂ ಬರಬಾರದೆಂಬ ನೋವು, ಚಿಂತೆ, ಅಸಹಾಯಕತೆ ಇಲ್ಲಿ ಚಿತ್ರಿತವಾಗಿದೆ. ಅಂದರೆ ತನ್ನ ಕಾಲದ ಸೃಷ್ಟಿಗಳು ತನ್ನ ಕಾಲದಲ್ಲಿಯೇ

ಪತನಗೊಳ್ಳುವುದನ್ನು ಯಾರೂ ಸಹಿಸಲಾರರು. ಹೀಗೆ ದ್ವಾಪರಯುಗದ ಮಾತುಗಳಲ್ಲಿ ಯುದ್ಧದ ದುಷ್ಪರಿಣಾಮಗಳನ್ನು ನೋವಿನಿಂದ ಹೇಳುವ ಮೂಲಕ ಯುದ್ಧ ನಿರಾಕರಣೆಯ ಜೊತೆಗೆ ಶಾಂತಿಯ ಸ್ಥಾಪನೆಯಾಗಬೇಕೆಂಬ ನೆಲೆಯನ್ನು ಗುರುತಿಸಬಹುದು.

ದ್ವಾಪರಯುಗ ಅತೀವ ನೋವಿನಿಂದ ತನ್ನ ಕಾಲದ ಭೀಷ್ಮ, ದ್ರೋಣ, ಕರ್ಣ, ಅರ್ಜುನರಂತಹ ಶ್ರೇಷ್ಠರು ನಿನ್ನಕಾಲದಲ್ಲಿ ಹುಟ್ಟುವರೇ ಎಂದು ಪ್ರಶ್ನಿಸಲು ಕಲಿಯುಗ ಹೀಗೆ ಪ್ರತಿಕ್ರಿಯೆಸುತ್ತಾನೆ.

"ಕರ್ಬೊಗೆಯ ಕಾರುವ ಸಿಡಿಲ್ಗಳನೆ ನಿರ್ಮಿಪರ್?

ಗ್ರಹ ಚಂದ್ರ ತಾರೆಗಳನಲೆಯುವರ್; ತೂಗುವರ್!"[5] ಎಂಬ ಮಾತುಗಳಲ್ಲಿ ಕಲಿಯುಗ ತನ್ನ ಕಾಲದಲ್ಲಿ ಭೀಷ್ಮ, ದ್ರೋಣ, ಕರ್ಣ, ಅರ್ಜುನರಂತಹವರನ್ನು ಮೀರಿದ ವೀರರು ಹಾಗೂ ದ್ವಾಪರಯುಗದ ಸೃಷ್ಟಿಯನ್ನು ಮೀರಿದ ನವ ನಿರ್ಮಿತಿಗಳು ಆಗುತ್ತವೆ ಎಂಬುದನ್ನು ಹೆಮ್ಮೆಯಿಂದ ಹೇಳಿ ದ್ವಾಪರನನ್ನು ಸಮಾಧಾನಿಸುತ್ತಾನೆ.

ಯುದ್ಧಭೂಮಿಯಲ್ಲಿ ಮಾತೆ ತನ್ನ ಕಂದನೊಂದಿಗೆ ಪಾಂಡವ ಪಕ್ಷದ ಮಡಿದ ಕಾಲಾಳು ಆಗಿದ್ದ ತನ್ನ ಗಂಡನನ್ನು ಹುಡುಕುತ್ತ ಬರುತ್ತಾಳೆ. ಅಮಾಯಕ ಕಂದ ಮತ್ತು ಮಾತೆಯ ಮಾತಿನಲ್ಲಿ ಯುದ್ಧ ವಿರೋಧಿಯ ನೆಲೆಯನ್ನು ಗುರುತಿಸಬಹುದು. ಸೈನಿಕನ ಕಳೇಬರವನ್ನು ನೋಡಿ ಕಂದ ಯಾರವನು ಎಂದು ಕೇಳುತ್ತಾನೆ. ಅದಕ್ಕೆ ನಿನ್ನಂತಹ ಮಗುವನ್ನು ಪಡೆದಿರುವ ತಂದೆ ಇವನು ಎಂದು ಮಗುವಿಗೆ ಅರ್ಥವಾಗುವ ರೀತಿ ಹೇಳುತ್ತಾಳೆ. ಮಗುವಿನ ಪ್ರಶ್ನೆಗಳು ಮುಂದುವರೆದಂತೆ ಬಾಳು-ಸಾವಿನ ಬಗ್ಗೆ ಅರಿಯದ ಮಗುವಿಗೆ ಯುದ್ಧಭೂಮಿಯಲ್ಲಿ ಕಳೇಬರಗಳೊಂದಿಗೆ ನಡೆಯುತ್ತ ಸಾವನ್ನು ತನ್ನ ಮಗುವಿಗೆ ಮಾತೆ ಅರ್ಥಮಾಡಿಸುವ ಪ್ರಯತ್ನ ಅತ್ಯಂತ ಧಾರುಣವಾದುದು. ಈ ಸನ್ನಿವೇಶ ಹೃದಯ ವಿದ್ರಾವಕವಾದುದು.

"ಕಂದ – ಮರಳಿ ಮೇಲೇಳನೇ?

ಮಾತೆ – ಮೇಲೇಳನು.

ಕಂದ – ಮರಳಿ ಮಾತಾಡನೇ?

ಮಾತೆ – ಇಲ್ಲ.

ಕಂದ – ನನ್ನಂತೆ ಇವನಿಗೊಬ್ಬ ಕಂದನಿಹನೆಂದು ಹೇಳಿದೆಯಲ್ಲಾ, ಆ ಕಂದನನು ಮರಳಿ ಎದೆಗಪ್ಪಿ ನಲಿಯನೇ?"[6] ಇಂತಹ ಮಗುವಿನ ಮುಗ್ಧ ಪ್ರಶ್ನೆಗಳು

ಎಂತಹವರಿಗೂ ಕರುಣೆಯನ್ನು ಉಂಟು ಮಾಡಿ ಸಂಕಟಕ್ಕೆ ಈಡು ಮಾಡುತ್ತದೆ. ಹಸುಳೆಯ ಮಾತುಗಳ ಮೂಲಕವು ಸಹ ಯುದ್ಧವನ್ನು ವಿರೋಧಿಸುವ ಮತ್ತು ಆ ಮೂಲಕ ಶಾಂತಿಯ ನೆಲೆಸುವಂತಾಗಲೆಂಬ ಆಶಯವಿದೆ. ಹಾಗೆಯೇ ಯುದ್ಧಗಳಿಂದ ಅಸಹಾಯಕತೆ, ಶೋಷಣೆ, ಅನಾಥರಾಗುವ ಮಹಿಳೆಯರ ಬದುಕಿನ ಪ್ರತಿನಿಧಿಗಳಾಗಿ ಮಾತೆ ಮತ್ತು ಮುದುಕಿಯರ ಪಾತ್ರಗಳು ಚಿತ್ರಿತವಾಗಿವೆ. ಮಾತೆ ತನ್ನ ಕಂದನಿಗೆ ಸಾವಿನ ಪರಿಚಯವನ್ನು ಮಾಡಿಕೊಡುವ ಸಂದರ್ಭದಲ್ಲಿ ಅವಳಲ್ಲಿ ವ್ಯಕ್ತವಾದ ದುಃಖ, ಅಸಹಾಯಕತೆ, ಭಯ, ಚಿಂತೆಗಳಲ್ಲಿ ಯುದ್ಧ ವಿರೋಧಿ ನಿಲುವಿದೆ.

ಮುದುಕಿ ತನ್ನ ಮಗ ಕೌರವ ಪಕ್ಷದ ಮಡಿದ ಕಾಲಾಳು ಆಗಿದ್ದವನನ್ನು ಹುಡುಕುತ್ತ ದೊಣ್ಣೆಯೂರಿಕೊಂಡು ಬರುತ್ತಾಳೆ. ಆಗ ಮುದುಕಿಯ ಅನುಭವಜನ್ಯ ಮಾತುಗಳಲ್ಲಿ ಹೇಗೆ ರಾಜರು, ಸೇನಾಧಿಕಾರಿಗಳು ದೇಶಾಭಿಮಾನ, ಸ್ವಾಮಿಭಕ್ತಿ, ಧರ್ಮನಿಷ್ಠೆ, ಕ್ಷಾತ್ರಧರ್ಮ ಎಂಬ ಸವಿಯಾದ ಮಾತುಗಳನ್ನು ಹೇಳಿ ಸೈನ್ಯಕ್ಕೆ ಜನರನ್ನು ಸೇರಿಸಿಕೊಳ್ಳುತ್ತಾರೆ. ಆ ಮಾತುಗಳಿಗೆ ಕುಟುಂಬದವರು ತರುಣರು ಮರುಳಾಗುವುದನ್ನು ಹಾಗೂ ಯುದ್ಧಾನಂತರ ಆ ಮಾತುಗಳೆಲ್ಲ ತಿಳಿದವರು ತಿಳಿಯದವರಿಗೆ ಹೇಳುವ ಸುಳ್ಳು ಮತ್ತು ಬಲೆಯ ಉರುಳುಗಣ್ಣಿಗಳು ಎಂದು ರೋಧಿಸುತ್ತಾಳೆ. ಶ್ರೀಮಂತರ ಕಲಹವೆಂಬ ಯಜ್ಞಕ್ಕೆ ಬಲಿಯಾಗುವ ಪಶುಗಳು ನಮ್ಮಂತಹ ದರಿದ್ರರೆಂದು ಚಿಂತಿಸುತ್ತಾಳೆ. ಮುದುಕಿ ತನ್ನ ಮಗನನ್ನು ಮತ್ತು ಮಾತೆ ತನ್ನ ಗಂಡನನ್ನು ಯುದ್ಧಭೂಮಿಯಲ್ಲಿ ವಿರುದ್ಧ ದಿಕ್ಕುಗಳಿಂದ ಹುಡುಕುತ್ತ ಬಂದು ಪರಸ್ಪರ ಸಂಧಿಸುತ್ತಾರೆ. ಆಗ ಮುದುಕಿ ಹೀಗೆ ಕೇಳುತ್ತಾಳೆ.

"ಮುದುಕಿ – ನಿನ್ನ ಪತಿ ಆರ ಕಡೆಯವನ್?

ಮಾತೆ – ಪಾಂಡವರ ಪಕ್ಷದವನ್, – ನಿನ್ನ ಪುತ್ರನ್

ಮುದುಕಿ – ಕೌರವನವನ್,

ಮಾತೆ – ನಿನ್ನ ಮಗನೆನ್ನ ಪತಿಗೆ ಪಗೆಯಾಗಿರ್ದನೇನ್?

ಮುದುಕಿ – ಆರಿಗಾರು ಪಗೆ? ನಿನಗಾನ್ ಪಗೆಯೆ?"[7] ಎಂಬ ಸಾಮಾನ್ಯ ಮಹಿಳೆಯರ ಮಾತುಗಳಲ್ಲಿ ತಾವು ಯಾರಿಗೂ ಯಾರೂ ಶತ್ರುಗಳಲ್ಲ. ಇವರ ಮುಂದುವರೆದ ಮಾತುಗಳಲ್ಲಿ ಸಹ ಬಡವರಾದ ನಾವು ಮಂಕುಗಳು, ಪಾಂಡವರು, ಕೌರವರು ನೆಲಕ್ಕೆ ಹೊಯ್ದಾಡಿದರೆ ನಮ್ಮ ಮಕ್ಕಳು ಅವರಿವರ ಸ್ನೇಹಕ್ಕೆ ನಿಂತು ಹೆಮ್ಮೆಗೆ ಬಡಿದಾಡಿ ಸಾಯುವವರು. ನಾವಿಬ್ಬರು ಸಮಾನ ದುಃಖಿಗಳು ಎಂದು ಮುದುಕಿ ಹೇಳುತ್ತಾಳೆ. ಮುದುಕಿಯ ಮಗ ಮಾತೆಯ ಗಂಡ ಪರಸ್ಪರ

ಇರಿದುಕೊಂಡು ಮಡಿದಿರುತ್ತಾರೆ. ಆಗ ಅದನ್ನು ನೋಡಿ ದುಃಖಿಸುತ್ತ, ಪರಸ್ಪರ ಸಂತೈಸಿಕೊಳ್ಳುತ್ತ ಮುದುಕಿ ಪಾಂಡವರು ಹಾಳಾಗಲಿ ಎಂದು ಮಾತೆ ಕೌರವರು ಹಾಳಾಗಲೆಂದು ಶಪಿಸುತ್ತ ಗೋಳಾಡುತ್ತಾರೆ. ಸಾಮಾನ್ಯರಿಗೆ ಸಾಮಾನ್ಯ ಬದುಕು ಸಾಕು. ಆದರೆ ಸಾಮಾನ್ಯರ ಬದುಕುಗಳನ್ನು ಬಳಸಿಕೊಂಡು ಬಲಿಕೊಟ್ಟು ಹೆಮ್ಮೆ ಪಡುವವರು ರಾಜರು, ರಾಜಕಾರಣಿಗಳು.

ಸಾಮಾನ್ಯ ಪಾತ್ರಗಳು ಮುಖ್ಯವಾಗಿ ಮಹಿಳಾ ಪಾತ್ರಗಳ ಮೂಲಕ ಯುದ್ಧ ವಿರೋಧಿಸುವ ನಿಲುವು ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಗಾಂಧಾರಿ ಯುದ್ಧಭೂಮಿಯಲ್ಲಿ ದುರ್ಯೋಧನನ್ನು ಹುಡುಕುವ ಸಂದರ್ಭದಲ್ಲಿ ತನ್ನ ಮಗ ದೈವಕ್ಕೆ ದ್ರೋಹಿ, ಭೀಮನಿಗೆ ಶತ್ರು, ಧರ್ಮಕ್ಕೆ ಬಾಹಿರ ಹೀಗೆ ನೀನು ಏನೇ ಆಗಿದ್ದರೂ ನನಗೆ ಮಾತ್ರ ಮುದ್ದು ಕಂದ ಅಳುವ ತಾಯಿ ದುಃಖದಲ್ಲಿ ಸಾಮಾನ್ಯತೆ ಇದೆ. ಹಾಗೆಯೇ ಕರ್ಣನ ಕಳೇಬರವನ್ನು ಪಾಂಡವ ಪಕ್ಷದವರ ಚಿತೆಯಲ್ಲಿ ದಹಿಸುವಂತೆ ಕೇಳುವ ಸನ್ನಿವೇಶದಲ್ಲೂ ಸಹ ತಾಯ್ತನ ಕಟ್ಟೆಯೊಡೆದು ಗೋಳಾಡುತ್ತ ಭೀಮನಿಗೆ ಹೀಗೆ ಹೇಳುತ್ತಾಳೆ. "ಓ ಭೀಮ, ತಾಯಿಗೋಸುಗಮಾದೊಡಂ ಕರಗಲಾರಯೇನ್? ಬೆಂದೊಡಲ್ಗಿಂತು ಕಬ್ಬುನಂ ಚುರ್ಚುವರೇನ್?"[8] ಹೀಗೆ ದೈನ್ಯದಿಂದ ಕೇಳಿಕೊಳ್ಳುತ್ತಾಳೆ. ಕರ್ಣನ ಏಳಿಗೆಯನ್ನು ನೋಡಿ ಸಂತಸ ಪಡುತ್ತ, ಕಷ್ಟ, ಅವಮಾನಗಳನ್ನು ಕಂಡು ಮರೆಯಲ್ಲಿ ಮರುಗುತ್ತ, ಆತನ ಹುಟ್ಟನ್ನು ಇಲ್ಲಿಯ ತನಕ ಯಾರಿಗೂ ಹೇಳದೆ ರಹಸ್ಯವಾಗಿಟ್ಟಿದ್ದಳು. ಆದರೆ ತನ್ನ ಕಣ್ಣೆದುರಿನಲ್ಲಿ ತನ್ನ ಕರುಳಕುಡಿಯ ಕಳೇಬರವನ್ನು ಕಂಡು ಗೋಳಾಡುವ ಸಂದರ್ಭದಲ್ಲಿ ಆಕೆ ಒಬ್ಬ ಸಾಮಾನ್ಯ ತಾಯಿಯಾಗಿ ಕಂಡುಬರುತ್ತಾಳೆ.

ಹೀಗೆ 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ಆಯಾ ಪಾತ್ರಗಳ ಮೂಲಕ ಅವುಗಳ ಲೋಕದೃಷ್ಟಿ, ಮನೋಭಾವಗಳನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಪಾಂಡವ, ಕೌರವ ಮತ್ತು ಕೃಷ್ಣರ ಕಥೆಗಳನ್ನು ಜನ ಸಾಮಾನ್ಯರ ಬದುಕಿನೊಂದಿಗೆ ಮುಖಾಮುಖಿಯಾಗಿಸುತ್ತಾರೆ. ಚಾಣೂರ, ನೀಲಾಕ್ಷ, ಗೀರ್ವಾಣ, ಮುದುಕಿ, ಮಾತೆ ಮತ್ತು ಕಂದರ ಹೊಸಪಾತ್ರಗಳ ಸೃಷ್ಟಿಯ ಮೂಲಕ ಜನಸಾಮಾನ್ಯರ ಬದುಕಿನೊಂದಿಗೆ ಯುದ್ಧದ ಪರಿಣಾಮಗಳನ್ನು ಚಿಂತನೆಗೆ ಒಳಗು ಮಾಡುತ್ತಾರೆ.

ನಾಟಕದ ಶೀರ್ಷಿಕೆ 'ಸ್ಮಶಾನ ಕುರುಕ್ಷೇತ್ರಂ'ನಲ್ಲಿಯೇ ಕುರುಕ್ಷೇತ್ರ ಜಾಗವು ಸ್ಮಶಾನವಾದುದನ್ನು ಔಚಿತ್ಯಪೂರ್ಣವಾಗಿ ಕಟ್ಟಿಕೊಡುತ್ತದೆ. ಇದು ಕೇವಲ ಕುರುಕ್ಷೇತ್ರದ ಯುದ್ಧ ಮಾತ್ರವಾಗಿರದೆ ಜಗತ್ತಿನ ಎಲ್ಲ ಯುದ್ಧಭೂಮಿಗಳು ಸಹ ಸ್ಮಶಾನಗಳಾದ ಮತ್ತು ಆಗುವಿಕೆಯನ್ನು ಧ್ವನಿಸುತ್ತದೆ. ಯುದ್ಧ ಭೂಮಿಯು ವೀರ, ರೌದ್ರ, ಭೀಬತ್ಸ ದೃಶ್ಯಗಳಿಗೆ ಮಾತ್ರ ಆಕರವಾಗಿತ್ತು. ಇಂತಹ ಸಂಪ್ರದಾಯಿಕ

ಚೌಕಟ್ಟನ್ನು ಮೀರಿ ಕುವೆಂಪು ಹೊಸತನವನ್ನು ತಂದಿದ್ದಾರೆ. "ಯುದ್ಧ ರಾಜಕಾರಣಕ್ಕೆ ತಮ್ಮದಲ್ಲದ ಕಾರಣಕ್ಕೆ ಹತರಾದ ಸೈನಿಕರ ಹಾಗೂ ಅವರ ಅವಲಂಬಿತರ ನೋವನ್ನು ಸಮರ್ಥವಾಗಿ ಸಂವಹನಗೊಳಿಸುವ ಈ ನಾಟಕವು ಕುವೆಂಪುರವರ ದಾರ್ಶನಿಕತೆಗೆ ಸಾಕ್ಷಿಯಾಗಿದೆ." ಯುದ್ಧಗಳು ಸಾವು, ನೋವು, ಸೋಲು, ಕ್ರೌರ್ಯ, ಹಿಂಸೆಗಳೊಂದಿಗೆ ಹೆಂಡತಿಯರು ವಿಧವೆಯರು ಆಗುವ ಅಥವಾ ಮಾನಾಘಾತಕ್ಕೆ ಒಳಗಾಗುವ ಆತಂಕಕ್ಕೆ, ಮಕ್ಕಳು ಅನಾಥರಾಗುವ ಸಂಕಟಕ್ಕೆ ಯೌವನದ ಮಗನನ್ನು ಕಳೆದುಕೊಂಡು ಆಧಾರ ಹೀನವಾಗುವ ಮುಪ್ಪಿನ ಜೀವಗಳ ವೇದನೆಗಳಿಗೆ ದಾರಿ ಮಾಡಿಕೊಡುತ್ತದೆ. ಇಂತಹ ದುಸ್ಥಿತಿಯಲ್ಲಿ ರಾಜನ ಕುಟುಂಬವಾಗಲಿ ಅಥವಾ ಶ್ರೀಸಾಮಾನ್ಯನ ಕುಟುಂಬವಾಗಲಿ ಎಲ್ಲವು ಒಂದೆ. ಈ ಶೀರ್ಷಿಕೆಯಲ್ಲಿಯೇ ಯುದ್ಧವಿರೋಧಿ ನೆಲೆಯಿದೆ.

ನಾಟಕದ ಅಂತ್ಯದಲ್ಲಿ ರುದ್ರನಿಗೆ ಕೃಷ್ಣ ದಿವ್ಯದರ್ಶನದಿಂದ ಮುಂಬರುವ ಕಲಿಯುಗವನ್ನು ವರ್ಣಿಸುತ್ತಾನೆ. ವರ್ಣನೆಯ ದೃಶ್ಯಮಾಲೆಗಳ ಅಂತ್ಯದಲ್ಲಿ ಸಾರ್ವಭೌಮತ್ವ ನಶಿಸಿ, ಸ್ವತಂತ್ಯ ಪಡೆದು ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಸರ್ವಸಮತ್ವದ ಜಗತ್ತಿನ ಕಲ್ಯಾಣದ ಪೂರ್ಣದೃಷ್ಟಿಯ ಸಂದೇಶವನ್ನು ಕುವೆಂಪು ನೀಡಿದ್ದಾರೆ.

### ಅಡಿಟಿಪ್ಪಣಿಗಳು

1. ಕುವೆಂಪು, ಸ್ಮಶಾನ ಕುರುಕ್ಷೇತ್ರಂ, ಉದಯರವಿ ಪ್ರಕಾಶನ, ಮೈಸೂರು, ಆರನೇ ಮುದ್ರಣ 1998, ಪೀಠಿಕೆ ಭಾಗ.
2. ಸಂ. ವಿಜಯಶಂಕರ ಎಸ್.ಆರ್, ಡಾ.ಯು.ಆರ್. ಅನಂತಮೂರ್ತಿ ಸಾಹಿತ್ಯ ವಿಮರ್ಶೆ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು –560009, 2012, ಪುಟ 200.
3. ಕುವೆಂಪು, ಸ್ಮಶಾನ ಕುರುಕ್ಷೇತ್ರಂ, ಉದಯರವಿ ಪ್ರಕಾಶನ, ಮೈಸೂರು, ಆರನೇ ಮುದ್ರಣ 1998, ಪುಟ 4.
4. ಅದೇ ಪುಟ 7.
5. ಅದೇ ಪುಟ 8.
6. ಅದೇ ಪುಟ 13.
7. ಅದೇ ಪುಟ 37.
8. ಅದೇ ಪುಟ 40.

### ಪರಾಮರ್ಶನ


1. ರಂಗಭೂಮಿ ವಿಶ್ಲೇಷಣೆ, ಕನ್ನಡ ರಂಗಪತ್ರಿಕೆ, ಜೂನ್ 16, 2014.
2. ದೇಜಗೌ, ಕುವೆಂಪು ದರ್ಶನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
3. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ನಾಟಕಗಳ ಅಧ್ಯಯನ, ಅಂಕಿತ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು.
4. ಡಾ. ಎನ್. ಸುಶೀಲ, ಕುವೆಂಪು ನಾಟಕಗಳ ಗುರು ಗುರಿ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು,